**ಸಾಕ್ಷಿಗೆ ದಿನಾಂಕಃ 10.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಆರ್.ಎಂ. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

ಸಾಕ್ಷಿಯು ನಿ.ಪಿ.6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಎಂ.ಗುರುಸ್ವಾಮಿ ಎನ್ನುವವರು ಸಹಿ ಮಾಡಿರುತ್ತಾರೆ. ವಾದಿ ಮತ್ತು ಪ್ರತಿವಾದಿ ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ಪಿ.ರವಿಚಂದ್ರ ಎನ್ನುವವರು ಬರೆದಿರುತ್ತಾರೆ. ಸದರಿ ದಾಖಲೆಗೆ ವಾದಿ ಮತ್ತು ಪ್ರತಿವಾದಿಯ ತಂದೆಯಾದ ಮಲ್ಲಪ್ಪ ರವರು ಸಹಿ ಮಾಡಿರುತ್ತಾರೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಓ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**